# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2388 |
| ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27.03.2026<br>(ಸಮಾಜ ಕಲ್ಯಾಣ ಇಲಾಖೆಯಿಂದ ವರ್ಗಾವಣೆಗೊಂಡಿರುತ್ತದೆ. |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಅತ್ಯಂತ ಹಿಂದುಳಿದ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಮತ್ತು ವೇತನಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; | 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಶುಲ್ಕಪಾವತಿ ಮತ್ತು ವಿದ್ಯಾರ್ಥಿ ವೇತನ ಪಾವತಿಯಾದ ವಿವರಗಳು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ಸರ್ಕಾರವು ವಿವಿಧ ಶಾಲಾ – ಕಾಲೇಜುಗಳಿಗೆ ನಿಗದಿಪಡಿಸಿದ ಶುಲ್ಕ ಮರುಪಾವತಿ ಮಾಡಲು ಕಡಿಮೆ ಹಣವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಶುಲ್ಕ ಮರುಪಾವತಿ ಕಾರ್ಯಕ್ರಮವನ್ನು ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 551 ಬಿಎಂಎಸ್ 2023, ದಿನಾಂಕ:06.11.2023 ಮತ್ತು ತಿದ್ದುಪಡಿ ಆದೇಶ ಸಂಖ್ಯೆ:ಹಿಂವಕ 522 ಬಿಎಂಎಸ್ 2024, ದಿನಾಂಕ:04.09.2024 ರ ಅನುಸಾರ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಆದೇಶಗಳಂತೆ ಹಿಂದುಳಿದ ವರ್ಗಗಳ ಎಲ್ಲಾ ವಿದ್ಯಾರ್ಥಿಗಳಿಗೂ ವಿಶ್ವವಿದ್ಯಾಲಯಗಳಿಂದ ನಿಗದಿಪಡಿಸಿದ ಈ ಕೆಳಕಂಡ ಶುಲ್ಕದರಗಳು ಅಥವಾ ಇಲಾಖೆಯಿಂದ ನಿಗದಿಪಡಿಸಿದ ಶುಲ್ಕದರಗಳು ಯಾವುದು ಕಡಿಮೆಯೋ ಆ ಶುಲ್ಕದರಗಳನ್ನು ಪಾವತಿಮಾಡಲಾಗುತ್ತಿದೆ.<br>1. ಬೋಧನಾ ಶುಲ್ಕ<br>2. ಗ್ರಂಥಾಲಯ ಶುಲ್ಕ<br>3. ಪರೀಕ್ಷಾ ಶುಲ್ಕ<br>4. ಕ್ರೀಡಾ ಶುಲ್ಕ<br>5. ಪ್ರಯೋಗಾಲಯ ಶುಲ್ಕ |
| ಇ) | ಪ್ರವರ್ಗ-1ರ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ಮರುಪಾವತಿ ಮಾಡದಿದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ; ಇದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವುದಿಲ್ಲವೇ; | ಪ್ರವರ್ಗ-1 ರ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ SC/ST ವಿದ್ಯಾರ್ಥಿಗಳಿಗೆ ನೀಡುವ ದರಗಳಲ್ಲಿಯೇ ಶುಲ್ಕ ಮರುಪಾವತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

...2

| | | |
|---|---|---|
| ಈ) | ಸರ್ಕಾರದ ಆಧ್ಯತಾ ವಲಯದ ಶಿಕ್ಷಣದ ಅಡಿಯಲ್ಲಿ ಈ ರೀತಿಯಲ್ಲಿ ಶುಲ್ಕವನ್ನು ಮರುಪಾವತಿಸಿ ಮಾಡದೇ ಇದ್ದಲ್ಲಿ, ಈ ಪ್ರವರ್ಗ-1 ವಿದ್ಯಾರ್ಥಿಗಳು ಶಿಕ್ಷಣವನ್ನು ಮಧ್ಯದಲ್ಲಿಯೇ ಮೊಟಕುಗೊಳಿಸಿ, ನಿರುದ್ಯೋಗಿಗಳಾಗುವುದಿಲ್ಲವೇ; ಈ ಬಗ್ಗೆಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಹಿಂದುಳಿದ ವರ್ಗಗಳ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಅರ್ಹ ಪ್ರವರ್ಗ-1ರ ಎಲ್ಲಾ ವಿದ್ಯಾರ್ಥಿಗಳಿಗೂ ಸರ್ಕಾರದ ಆದೇಶದಂತೆ ಮೊದಲನೆ ಆದ್ಯತೆಯಲ್ಲಿ ಅನುದಾನ ಲಭ್ಯತೆಯನುಸಾರ ಶುಲ್ಕ ಮರುಪಾವತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳು ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿಯೂ ಸಹ ಈ ಕೆಳಕಂಡ ದರಗಳಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯಬಹುದಾಗಿರುತ್ತದೆ. |

| **ಕೋರ್ಸ್ ಗ್ರೂಪ್** | **ವಿದ್ಯಾರ್ಥಿ ವೇತನ ದರಗಳು (ರೂ.ಗಳಲ್ಲಿ)** |
|---|---|
| ಗ್ರೂಪ್ ಎ (ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿ ಕೋರ್ಸ್ ಗಳು) | 20000/- |
| ಗ್ರೂಪ್ ಬಿ (ಸ್ನಾತಕೋತ್ತರ ಪದವಿ ಮತ್ತು ಪಿಜಿ ಡಿಪ್ಲೋಮಾ ಕೋರ್ಸ್‌ಗಳು) | 13000/- |
| ಗ್ರೂಪ್ ಸಿ (ಸಾಮಾನ್ಯ ಪದವಿ ಕೋರ್ಸುಗಳು) | 8000/- |
| ಗ್ರೂಪ್ ಡಿ (ಪಿಯುಸಿ ಮತ್ತು ಸಮಾನಾಂತರ ಕೋರ್ಸುಗಳು) | 5000/- |

**ಸಂಖ್ಯೆ:ಹಿಂವಕ 306 ಬಿಂಎಂಎಸ್ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

**ಕರ್ನಾಟಕ ವಿಧಾನ ಪರಿಷತ್‌ನ ಸದಸ್ಯರಾದ ಶ್ರೀ ಡಿ.ಟಿ. ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2388ಕ್ಕೆ**

## ಅನುಬಂಧ

**2023-24,2024-25 ಮತ್ತು 2025-26 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಮತ್ತು ವಿದ್ಯಾರ್ಥಿ ವೇತನ ಪಾವತಿಯಾದ ವಿವರಗಳು ಈ ಕೆಳಕಂಡಂತಿವೆ.**

(ರೂ.ಕೋಟಿಗಳಲ್ಲಿ)

| ಯೋಜನೆಯಹೆಸರು | ಬಿಡುಗಡೆಯಾದ ಅನುದಾನ | 2023-24 | | ಬಿಡುಗಡೆಯಾದ ಅನುದಾನ | 2024-25 | | ಬಿಡುಗಡೆಯಾದ ಅನುದಾನ | 2025-26 | |
|---|---|---|---|---|---|---|---|---|---|
| | | ಪಾವತಿಯಾದ ಪ್ರವರ್ಗ-1 ರ ವಿದ್ಯಾರ್ಥಿಗಳ ಸಂಖ್ಯೆ | ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಪಾವತಿ ಮಾಡಲಾದ ಅನುದಾನ | | ಪಾವತಿಯಾದ ಪ್ರವರ್ಗ-1 ರ ವಿದ್ಯಾರ್ಥಿಗಳ ಸಂಖ್ಯೆ | ಪ್ರವರ್ಗ-1 ರ ವಿದ್ಯಾರ್ಥಿ ಗಳಿಗೆ ಪಾವತಿಮಾಡಲಾದ ಅನುದಾನ | | ಪಾವತಿಯಾದ ಪ್ರವರ್ಗ-1 ರ ವಿದ್ಯಾರ್ಥಿಗಳ ಸಂಖ್ಯೆ | ಪ್ರವರ್ಗ-1 ರ ವಿದ್ಯಾರ್ಥಿಗಳಿಗೆಪಾವತಿ ಮಾಡಲಾದ ಅನುದಾನ |
| ಮೆಟ್ರಿಕ್-ಪೂರ್ವ ವಿದ್ಯಾರ್ಥಿ ವೇತನ | 61.95 (*ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 37442 | 14.97 | 46.18( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 22436 | 8.97 | 43.27( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 22953 | 9.03 |
| ವಿದ್ಯಾಸಿರಿ | 58.99( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 4955 | 7.43 | 50.00( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 4633 | 6.94 | 105.00( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 5904 | 8.85 |
| ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ | 256.53( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 31089 | 23.92 | 122.86( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 17480 | 13.70 | 154.60( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 31620 | 23.35 |

| | | | | | | | | | |
|---|---|---|---|---|---|---|---|---|---|
| ಶುಲ್ಕ ಮರುಪಾವತಿ | 400.00 ( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 49948 | 33.06 | 473.47 ( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 62612 | 36.24 | 545.05 ( *ಪ್ರವರ್ಗ-1 ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸೇರಿ ಬಿಡುಗಡೆಯಾದ ಅನುದಾನ) | 17766 | 20.80 |
| ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ | 15.10(*ಪ್ರವರ್ಗ-1 ರಅಲೆಮಾರಿ/ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಬಿಡುಗಡೆಯಾದ ಅನುದಾನ) | 14120 | 12.19 | 15.39(*ಪ್ರವರ್ಗ-1 ರ ಅಲೆಮಾರಿ/ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಬಿಡುಗಡೆಯಾದ ಅನುದಾನ) | 16484 | 14.39 | 12.54(*ಪ್ರವರ್ಗ-1 ರ ಅಲೆಮಾರಿ/ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಬಿಡುಗಡೆಯಾದ ಅನುದಾನ) | 10672 | 9.69 |
| ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ವೇತನ | 9.44 (*ಪ್ರವರ್ಗ-1 ರಅಲೆಮಾರಿ/ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಬಿಡುಗಡೆಯಾದ ಅನುದಾನ) | 34826 | 8.36 | 9.60 (*ಪ್ರವರ್ಗ-1 ರ ಅಲೆಮಾರಿ/ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಬಿಡುಗಡೆಯಾದ ಅನುದಾನ) | 31658 | 8.22 | 11.27 (*ಪ್ರವರ್ಗ-1 ರಅಲೆಮಾರಿ/ಅಲೆಮಾರಿಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಬಿಡುಗಡೆಯಾದ ಅನುದಾನ) | 32900 | 9.38 |
| **ಒಟ್ಟು** | **802.01** | **172380** | **99.93** | **717.50** | **155303** | **88.46** | **871.73** | **121815** | **81.10** |

❖ ಹಿಂದುಳಿದ ವರ್ಗಗಳ ಶುಲ್ಕ ಮರುಪಾವತಿ, ವಿದ್ಯಾಸಿರಿ, ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಮತ್ತು ಮೆಟ್ರಿಕ್-ಪೂರ್ವ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಡಿ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಅನುದಾನ ಬಿಡುಗಡೆಯಾಗಿರುವುದಿಲ್ಲ. ಅಲೆಮಾರಿ /ಅಲೆಮಾರಿ ಜನಾಂಗದ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಡಿ ಮಾತ್ರ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಅನುದಾನ ಬಿಡುಗಡೆಯಾಗಿರುತ್ತದೆ.